ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ. 706/2017**

ಸಿ.ಡಬ್ಲೂ-1 ಪಿ.ಡಬ್ಲೂ -1

ದಿಃ **07.03.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ರೇಣುಕಾ |
| ಗಂಡ/ತಂದೆಯ ಹೆಸರು | ಮಂಜೇಗೌಡ |
| ವಯಸ್ಸು | ಸುಮಾರು 32 ವರ್ಷ |
| ಕೆಲಸ | ಗೃಹಿಣಿ |
| ವಾಸಸ್ಥಳ | ಸಿಂಡೆನಹಳ್ಳಿ |

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಗಂಡ. 1 ನೇ ಆರೋಪಿ ನನ್ನ ಭಾವ. 2 ನೇ ಆರೋಪಿ ನನ್ನ ವಾರಗಿತ್ತಿ. ದಿಃ11-08-2017 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಸಿಂಡೆನಹಳ್ಳಿಯ ನನ್ನ ಮಾವನಿಗೆ ಸೇರಿದ ಗದ್ದೆ ಬಳಿ ನಾನು ಹಾಗೂ ಚಾಸಾ-2 ಜೋಳದ ಕಡ್ಡಿ ಕಡೆಯಬೇಕಾದರೆ, ಚಾಸಾ-3 ಮತ್ತು 4 ರವರು ದಾಪು ಕಾಲು ಹಾಕಿ ಜಮೀನನ್ನು ಅಳತೆ ಮಾಡುತ್ತಿದ್ದರು. ಆಗ ನಾನು ದಾಪು ಕಾಲು ಬೇಡ, ಪೈಪ್ ನಿಂದ ಅಳತೆ ಮಾಡಿ ಎಂದು ಹೇಳಿದೇನು. 1 ನೇ ಆರೋಪಿ ಕೆಟ್ಟ ಪದಗಳಿಂದ ನನ್ನನ್ನು ನಿಂದಿಸಿದರು. ಆಗ ಚಾಸಾ-2 ರವರು ನನ್ನ ಹೆಂಡತಿಗೆ ಯಾಕೆ ಬೈಯ್ಯುತ್ತಿಯಾ ಎಂದು ಕೇಳಿದರು. 2 ನೇ ಆರೋಪಿ ಚಾಸಾ-2 ರವರ ಕಣ್ಣಿಗೆ ಖಾರದ ಪುಡಿಯನ್ನು ಎರಚಿರುತ್ತಾರೆ. 1 ನೇ ಆರೋಪಿ ದೊಣ್ಣೆಯಿಂದ ಚಾಸಾ-2 ರವರ ಎಡಕೈ, ತೊಳು ಹಾಗೂ ಮುಂಗೈಗೆ ಹೊಡೆದರು. ನನ್ನ ಮಾವನಾದ ಜವರೇಗೌಡ ಗೊಧಮಟ್ಟೆಯಿಂದ ಚಾಸಾ-2 ರವರ ಎಡಭಾಗದ ಪಕ್ಕೆಗೆ ಹೊಡೆದರು. 2 ನೇ ಆರೋಪಿ ಚಾಸಾ-2 ರವರ ಎಡ ತೊಳಿಗೆ ಹಾಗೂ ಬೆನ್ನಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ಚಾಸಾ-2 ರವರಿಗೆ 1 ನೇ ಆರೋಪಿ ಬಲಕೈ ತೊಳಿಗೆ ಕಚ್ಚಿರುತ್ತಾರೆ. ಆಗ ನಾನು ಬಿಡಿಸಲು ಹೋದಾಗ 2 ನೇ ಆರೋಪಿ ಖಾರದ ಪುಡಿ ಎರಚಿ, ನನ್ನ ಕತ್ತಲಿದ್ದ ಮಾಂಗಲ್ಯದ ಸರವನ್ನು ಕಿತ್ತು ಹಾಕಿರುತ್ತಾರೆ. 1 ನೇ ಆರೋಪಿ ಹಿಂದಿನಿಂದ ಬಂದು ದೊಣ್ಣೆಯಿಂದ ನನ್ನ ಎಡತೊಳಿಗೆ ಹಾಗೂ ಎಡಕಾಲಿಗೆ ಹೊಡೆದಿರುತ್ತಾನೆ. 1 ನೇ ಆರೋಪಿ ಮುಂದೆಲೆ ಹಿಡಿದು ಎಳೆದಾಡಿ, ನನ್ನ ರವಿಕೆಯ ಎರಡು ತೊಳು ಹಾಗೂ ಬೆನ್ನಿನ ಭಾಗವನ್ನು ಹರಿದು ಹಾಕಿರುತ್ತಾರೆ. ಆರೋಪಿತರೆಲ್ಲರೂ ಸೇರಿ ಚಾಸಾ-2 ರವರನ್ನು ಗದ್ದೆಯಲ್ಲಿ ತುಳಿಯುತ್ತಿದ್ದರು.

ಚಾಸಾ-3 ಮತ್ತು 4 ರವರು ಬಂದು ಜಗಳ ಬಿಡಿಸಿದರು. ಆರೋಪಿತರು ನಿಮ್ಮನ್ನು ಬಿಡುವುದಿಲ್ಲ, ತೆಗೆಯುತ್ತೇವೆಂದು ಬೆದರಿಕೆ ಹಾಕಿರುತ್ತಾರೆ. ನಂತರ ನಾವು ಹುಣಸೂರಿನ

ಸರ್ಕಾರಿ ಆಸ್ಪತ್ರೆಗೆ ಬಂದು ದಾಖಲಾಗಿರುತ್ತೇವೆ. ನಂತರ ಚಿಕಿತ್ಸೆ ಪಡೆದು ಠಾಣೆಯಲ್ಲಿ ದೂರು ದಾಖಲಿಸಿರುತ್ತೇವೆ. ಸಾಕ್ಷಿಗೆ ಗಣಕೀಕೃತ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ಕೊಟ್ಟ ಮಾರನೇ ದಿನ ಬೆಳಿಗ್ಗೆ ಪೊಲೀಸರು ನಮ್ಮ ಗ್ರಾಮದ ಸ.ನಂ.71 ರ ಗದ್ದೆಗೆ ಬಂದಿದ್ದು, ಅಲ್ಲಿ ನಾನು ಹಾಜರಿದ್ದು, ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಬೆಳಿಗ್ಗೆ 9.00 ರಿಂದ 10.00 ರವರೆಗೆ ಚಾಸಾ-5 ಮತ್ತು6 ರವರ ಸಮಕ್ಷಮ ಮಹಜರ್ ಕ್ರಮ ಕೈಗೊಂಡು, ಸ್ಥಳದಲ್ಲೇ ಇದ್ದ 2 ದೊಣ್ಣೆ ಹಾಗೂ ಗೊಧಮಟ್ಟೆಯನ್ನ ಅಮಾನತುಪಡಿಸಿಕೊಂಡು, ಅಲ್ಲಿಯೇ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ಮಹಜರ್ ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 2 ದೊಣ್ಣೆ, ಗೊಧಮಟ್ಟೆ ನೋಡಿ ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಮು.ಮಾ-1 ರಿಂದ 3 ಎಂದು ಗುರುತಿಸಲಾಯಿತು. ಪೊಲೀಸರು ಗಲಾಟೆಯಲ್ಲಿ ಹರಿದ ನನ್ನ ರವಿಕೆಯನ್ನು ಸಹ ತೆಗೆದುಕೊಂಡು ಹೋಗಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ರವಿಕೆ ನೋಡಿ ಗುರುತಿಸಿದ್ದು, ಅದನ್ನು ಮು.ಮಾ-4 ಎಂದು ಗುರುತಿಸಲಾಯಿತು. ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಹಾಗೂ 3-4 ದಿನಗಳ ನಂತರ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ದ.ಪ್ರ.ಸಂ 164 ರ ಹೇಳಿಕೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರೇ ನಮಗೆ ಹೊಡೆದು, ಮಾನಕ್ಕೆ ಚ್ಯುತಿ ಬರುವ ಹಾಗೆ ವರ್ತಿಸಿರುತ್ತಾರೆ.

ಈ ಹಂತದಲ್ಲಿ ಸ.ಸ.ಅ ರವರು ದೋಷಾರೋಪಣ ಪಟ್ಟಿಯಲ್ಲಿ ಕೈ ಬಿಡಲಾದ ಆರೋಪಿಯ ವಿರುದ್ಧ ಸಾಕ್ಷಿಯು ಸಾಕ್ಷ್ಯ ನುಡಿದಿದ್ದು, ಹಾಗಾಗಿ ಅಭ್ಯೋಜನ ಪರ ಪ್ರಮುಖ ಸಾಕ್ಷಿದಾರರುಗಳಾದ ಚಾಸಾ-2 ರಿಂದ 4 ರವರ ಸಾಕ್ಷ್ಯ ಮಾಡುವ ಅವಶ್ಯಕತೆಯಿರುವುದರಿಂದ ಸದರಿಯವರಿಗೆ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವಂತೆ ಸಮನ್ಸ್ ನೀಡಬೇಕಾಗಿ ಹಾಗೂ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿರುತ್ತಾರೆ.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ಹುಣಸೂರು.**